ಮುಕ್ತ ಸಮಾಜವಾದಿ ಮಾತುಕತೆ

26 ಡಿಸೆಂಬರ್ 2020

ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಅಭ್ಯರ್ಥಿಗಳು ಈಗಲೇ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಇದ್ದಾರೆ. ಈ ಸಮುದಾಯಗಳ ಜನಸಂಖ್ಯಾ ಪ್ರಮಾಣ 91%ರಷ್ಟಿದೆ. ಆದರೆ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಇವರ ಪ್ರಾತಿನಿಧ್ಯ 50%ರಷ್ಟೂ ಇಲ್ಲ. ಇದನ್ನು ಸರಿಪಡಿಸಲು ನಿಜಕ್ಕೂ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪಾರದರ್ಶಕ ಮತ್ತು ಪರಿಣಾಮಕಾರಿ ವಿಚಾರ ವಿನಿಮಯವನ್ನು ಸಂಬಂಧಿಸಿದ ಸಮುದಾಯಗಳ ಪ್ರತಿನಿಧಿಗಳ ಜೊತೆಗೆ ನಡೆಸುವುದು ಅವಶ್ಯವಾಗಿತ್ತು.



ಆದರೆ, ಈಗಿನ ಕೇಂದ್ರ ಈ ವಿಷಯದಲ್ಲಿ ಏಕಾಏಕಿ ಮತ್ತು ಏಕಪಕ್ಷೀಯ ನಿರ್ಣಯವನ್ನು ಕೈಗೊಂಡು, ಈ ಸಮುದಾಯಗಳ ಅಭ್ಯರ್ಥಿಗಳು ಉನ್ನತ ಶಿಕ್ಷಣ ಪ್ರವೇಶಿಸಿ, ಅಲ್ಲಿ ಅಧ್ಯಯನ ಮಾಡುವ ವಿಷಯದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಮಾಡಿದೆ. ಅದು 2020ರ ಡಿಸೆಂಬರ್ ತಿಂಗಳಲ್ಲಿ ಪ್ರಕಟಿಸಿರುವ ತೀರ್ಮಾನದಿಂದ ಈ ಸಮುದಾಯಗಳ ಭವಿಷ್ಯ ಕರಾಳವಾಗಲಿದೆ ಎಂಬ ಮುನ್ಸೂಚನೆ ಕಾಣುತ್ತಿದೆ.

ಇದುವರೆಗೆ ಈ ಸಮುದಾಯಗಳ ಅಭ್ಯರ್ಥಿಗಳು ಉನ್ನತ ಶಿಕ್ಷಣ ಕ್ಷೇತ್ರ ಪ್ರವೇಶ ಮಾಡಿದಾಗ, ಅವರಿಗೆ ರಾಜ್ಯ ಸರ್ಕಾರಗಳು ಮಾಡುತ್ತಿದ್ದ ವೆಚ್ಚದಲ್ಲಿ 11%ರಷ್ಟನ್ನು ಮಾತ್ರ ಒದಗಿಸುತ್ತಿತ್ತು. ಇತ್ತೀಚೆಗೆ ರಾಹುಲ್ ಗಾಂಧಿ, 'ಬಿಜೆಪಿ ಆಡಳಿತದಲ್ಲಿ ಈ ಸಮುದಾಯಗಳ ಯುವಜನರು ಶೈಕ್ಷಣಿಕವಾಗಿ ಹಿಂದುಳಿಯುವಂಥ ಕ್ರಮಗಳನ್ನೇ ಕೈಗೊಳ್ಳುತ್ತಿದೆ' ಎಂದು ಆರೋಪ ಮಾಡಿದ್ದರು.

ಈ ಹಿನ್ನೆಲೆಯಲ್ಲಿಯೋ ಏನೊ, ಮುಂದಿನ ಐದು ವರ್ಷಗಳಲ್ಲಿ ಈ ಸಮುದಾಯಗಳ ನಾಲ್ಕು ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಅವಕಾಶಗಳನ್ನು ಪಡೆದುಕೊಳ್ಳುವುದು ಸಾಧ್ಯವಾಗಬೇಕು ಎಂಬ ದೃಷ್ಟಿಯಿಂದ ತಾನು 'ಪ.ಜಾತಿಗಳ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿವೇತನ ರಾಷ್ಟ್ರೀಯ ಯೋಜನೆ'ಯನ್ನು ರೂಪಿಸಿರುವುದಾಗಿ ಕೇಂದ್ರ ಸರ್ಕಾರ ಹೇಳಿಕೊಂಡಿದೆ.

**ಹೊಸ ಯೋಜನೆ ಅಲ್ಲ**

ಇದು ಹೊಸ ಯೋಜನೆ ಅಲ್ಲ. ಸ್ವಾತಂತ್ರ್ಯ ಬಂದಾಗಿನಿಂದಲೂ ಇದು ಜಾರಿಯಲ್ಲಿತ್ತು. ಆದರೆ, ಇದರ ಬಗ್ಗೆ ಯಾವ ಸರ್ಕಾರವೂ ಆದ್ಯತೆಯನ್ನು ನೀಡಿರಲಿಲ್ಲ. ಹಾಗಾಗಿ 2002–03ನೇ ಸಾಲಿನ ವರೆಗೆ ಈ ಯೋಜನೆಯ ಪ್ರಯೋಜನವನ್ನು ದೇಶದಲ್ಲಿ ಈ ಸಮುದಾಯಗಳ ಕೇವಲ 6%ರಷ್ಟು ಅಭ್ಯರ್ಥಿಗಳು ಪಡೆದುಕೊಳ್ಳುತ್ತಿದ್ದರು; ನಂತರದ

## ಯೋಜನೆ ಜಾರಿಗೆ ಖಂಡನೆ

ಪ.ಜಾತಿ, ಪ.ಪಂಗಡ, ಇತರ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಒದಗಿಸುತ್ತಾ ಬರುತ್ತಿರುವ ವಿದ್ಯಾರ್ಥಿವೇತನ ಯೋಜನೆಯಲ್ಲಿ ಯಾವುದೇ ಘಾತುಕ ಬದಲಾವಣೆಗಳನ್ನು ಮಾಡಕೂಡದು ಎಂದು ವಿ.ಸಿ.ಕೆ. ಪಕ್ಷದ ಸ್ಥಾಪಕ ತಿರುಮಾವಳವನ್ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪ್ರತಿ ವರ್ಷ ಈ ಸಮುದಾಯಗಳ ಸುಮಾರು 80 ಲಕ್ಷ ವಿದ್ಯಾರ್ಥಿ–ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನ ಪಡೆಯುತ್ತಿದ್ದು, ಈ ಯೋಜನೆಯನ್ನು ಘಾತುಕವಾಗಿ ಬದಲಾವಣೆ ಮಾಡುತ್ತಿರುವ ಪ್ರಯತ್ನಗಳನ್ನು ಒಪ್ಪಲು ಸಾಧ್ಯವಿಲ್ಲ. ಅಲ್ಲದೆ, ವಿದ್ಯಾರ್ಥಿವೇತನ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳಿಗೆ ಪರೀಕ್ಷೆ ನಿಗದಿಪಡಿಸಿ, ಅದರಲ್ಲಿ ರ್‍ಯಾಂಕ್ ಪಡೆದವರಿಗೆ ಮಾತ್ರ ವಿದ್ಯಾರ್ಥಿವೇತನ ನೀಡಲಾಗುವುದು ಎಂಬ ನಿಯಮವನ್ನು ಅಳವಡಿಸಿರುವುದು ಖಂಡನೀಯ ಎಂದು ಅವರು ತಿಳಿಸಿದರು.

ಹಾಸ್ಟೆಲ್ ಸೌಲಭ್ಯ ಮತ್ತು ವಿದ್ಯಾರ್ಥಿವೇತನ ಸೌಲಭ್ಯವನ್ನು ಒದಗಿಸದೇ ಹೋದರೆ, ಈ ಸಮುದಾಯಗಳ ಬಹುತೇಕ ವಿದ್ಯಾರ್ಥಿ–ವಿದ್ಯಾರ್ಥಿನಿಯರು ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುವುದು ಬಹುತೇಕ ಖಚಿತ; ಆಗ, ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶಿಸುವ ಅವರ ಹಕ್ಕನ್ನು ಮೊಟಕುಗೊಳಿಸಿದಂತೆ ಆಗುತ್ತದೆ; ಈ ಪ್ರಕ್ರಿಯೆಯಿಂದಾಗಿ ಉನ್ನತ ಶಿಕ್ಷಣ ಕ್ಷೇತ್ರ ಮತ್ತೆ ಕೆಲವೇ ಕೆಲವು ಸಮುದಾಯಗಳ ಸೊತ್ತಾಗಿ ಉಳಿದು, 21ನೇ ಶತಮಾನದ ಸರ್ಕಾರವು ಸಂವಿಧಾನದ ಆಶಯಕ್ಕೆ ಅಪಚಾರ ಎಸಗಿ, ಮನುಸ್ಮೃತಿಯನ್ನು ಅನುಸರಿಸಿದಂತೆ ಆಗುತ್ತದೆ; ಇದನ್ನು ಈ ಸಮುದಾಯಗಳ ಜನರು ಎಂದಿಗೂ ಒಪ್ಪುವುದಿಲ್ಲ ಎಂದು ಅವರು ಕೇಂದ್ರ ಸರ್ಕಾರದ ಗಮನ ಸೆಳೆದರು. ■



ವಿ.ಸಿ.ಕೆ. ಪಕ್ಷದ ಸ್ಥಾಪಕ ತಿರುಮಾವಳವನ್